**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.9/2020**

ಸಾಕ್ಷಿದಾರರ ಹೆಸರು : ಮೊಹಮ್ಮದ್ ಸೈಫುದ್ದೀನ್

ತಂದೆಯ/ಗಂಡನ ಹೆಸರು : ಅಬ್ದುಲ್ ಮಜೀದ್

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಪಿ ಎಸ್ ಐ

ವಾಸ ಸ್ಥಳ : ಹರಿಹರ

ಪಿ.ಡಬ್ಲ್ಯೂ 14

ಸಿ.ಡಬ್ಲ್ಯೂ 8

ದಿ: 22-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. 2019 ರಿಂದ 2023 ರ ವರಗೆ ಹರಿಹರ ಗ್ರಾಮಾಂತ ಪೋಲೀಸ್ ಠಾಣೆ ಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ದಿನಾಂಕಃ 12.09.2020 ರಂದು ಮದ್ಯಾಹ್ನ 12-00 ಗಂಟೆಗೆ ಠಾಣಾ ಪ್ರಭಾರ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನನಗೆ ನೀಡಿದ ನಿ.ಪಿ.- 17 ರಂತೆ ಸ್ವೀಕರಿಸಿ ಠಾಣಾ ಅಪರಾದ ಸಂಖ್ಯೆ 136/2020 ನೇದಕ್ಕೆ ದಾಖಲಿಸಿಕೊಂಡಿರುತ್ತೇನೆ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಅದನ್ನು ಈಗ ನೋಡುತ್ತಿದ್ದು ನಿ.ಪಿ.- 22 ಎಂದು ಅದರಲ್ಲಿನ ನನ ಸಹಿಯನ್ನು ನಿ.ಪಿ.- 22 (ಎ) ಎಂದು ಗುರುತಿಸುತ್ತೇನೆ.

2. ನಂತರ ಚಾಸಾ-1 ರವರು ದಾಳಿ ಮಾಡಿ ಪಂಚನಾಮೆ ಮತ್ತು ಅಮಾನತ್ತು ಮಾಡಿಕೊಂಡ ವಸ್ತುಗಳನ್ನು ಮತ್ತು ಆರೋಪಿತರನ್ನು ನನ್ನ ಸಮಕ್ಷಮ ಹಾಜರುಪಡಿಸಿದರು ಆ ಪಂಚನಾಮೆ ನಿ.ಪಿ.- 2 ಎಂದು ಹಾಗೂ ವಶಪಡಿಸಿಕೊಂಡ ವಸ್ತುಗಳು ಎಂ ಒ 1 ರಿಂದ 7 ಇರುತ್ತವೆ. ಆರೋಪಿತರ ಪೈಕಿ 1 ಮತ್ತು 3 ನೇ ಆರೋಪಿ ತರನ್ನು ವಿ ಸಿ ಯಲ್ಲಿ ನೋಡಿ ಗುರುತಿಸುತ್ತೇನೆ. 2 ನೇ ಆರೋಪಿತರನ್ನು ಗುರುತಿಸಲು ಆರೋಪಿ ಪರ ವಕೀಲರು ಏನೂ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

3. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಪಿ ಎಫ್ ನಂ 105/2020 ಕ್ಕೆ ದಾಖಲಸಿಸಿ ನ್ಯಾಯಾಲಯಕ್ಕೆ ನೀವೇದಿಸಿಕೊಂಡಿರುತ್ತೇನೆ ಪಂಚರು 2 ಮತ್ತು 3 ರವರನ್ನು ಹಾಗೂ ಸಿಬ್ಬಂದಿಗಳಾದ ರಾದ ಚಾಸಾ-5 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇ ಆರೋಪಿ ತರ ಸ್ವ ಇಚಾ ಹೇಳಿಕೇಯನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿ.ಪಿ.- 23 ರಿಂದ 25 ಎಂದು ಗುರುತಿಸುತ್ತೇನೆ ಅವುಗಳಲ್ಲಿ ನನ್ನ ಸಹಿಯಗಳನ್ನು ನಿ.ಪಿ.- 23(ಎ) ರಿಂದ 25(ಎ) ಮತ್ತು ಆರೋಪಿತರ ಸಹಿಯನ್ನು ನಿ.ಪಿ.- 23(ಬಿ) ರಿಂದ 25(ಬಿ) ಎಂದು ಗುರುತಿಸುತ್ತೇನೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ ದಸ್ತಗಿರಿ ನಿಯಮವನ್ನು ಪಾಲಿಸಿರುತ್ತೇನೆ. ಹರಿಹರ ನ್ಯಾಯಾಲಯದಿಂದ ಈ ನ್ಯಾಯಾಲಯಕ್ಕೆ ಎಫ್ ಐ ಆರ್ ನ್ನು ಈ ನ್ಯಾಯಾಲಯಕ್ಕೆ ವರ್ಗಾಯಿಸಲು ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ.

4. ದಿನಾಂಕ 15-09-2020 ರಂದು ಹರಿಹರ ನ್ಯಾಯಾದೀಶರ ಮುಂದೆ inventory ಕ್ರಮವನ್ನು ಜರುಗಿಸಿ ಆ ವರದಿಯನ್ನುಪಡೆದುಕೊಂಡ ನಂತರ ಈ ಪ್ರಕರಣಕ್ಕೆ ಅಳವಡಿಸಿರುತ್ತೇನೆ. ಆ inventory ಈಗ ನೋಡುತ್ತಿದ್ದು ಅದನ್ನು ನಿ.ಪಿ.- 26 ಎಂದು ಗುರುತಿಸಲಾಯಿತ್ತು. inventory ಸಮಯದಲ್ಲಿ ತೆಗೆದ 3 ಪೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿ.ಪಿ.- 27 ರಿಂದ 29 ಎಂದು ಗುರುತಿಸಲಾಯಿತು.

5. ನಂತರ ಸಿಬ್ಬಂದಿ ಮೂಲಕ ಅಮಾನತ್ತು ವಸ್ತುಗಳನ್ನು FSL ಗೆ ಕಳುಹಿಕೊಟ್ಟಿರುತ್ತೇನೆ. ನಂತರ FSL ರವರು ಸರಿಯಾಗಿ ಒಣಗಿಸಿ ಪುನಃ ಸಲ್ಲಿಸಲು ಸೂಚಿಸಿ ವಾಪಸ್ ಕೊಟ್ಟರು. ಆ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.- 30 ಎಂದು ಗುರುತಿಸಲಾಯಿತು. ಆ ವಸ್ತುಗಳನ್ನು ಸ್ವೀಕರಿಸಿದ ನಂತರ ಅದನ್ನು ಒಣಗಿಸಿ ಪುನಃ inventory ಮಾಡಲಾಯಿತು. ಆ 2 ನೇ inventory ನೋಡುತ್ತಿದ್ದು ಅದನ್ನು ನಿ.ಪಿ.- 31 ಎಂದು ಗುರುತಿಸಲಾಯಿತು. ಆ ನಂತರ ಪುನಃ ಆ ವಸ್ತುಗಳನ್ನು FSL ಗೆ ಕಳುಹಿಸಲಾಯಿತು. ನಂತರ ತನಿಖೆ ಪೂರೈಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ನಂತರ ಕೇಸ್ ಡೈರಿಯೊಂದಿಗೆ ಅಂತಿಮ ದೋಷಾರೋಪಣಾ ವರದಿಯನ್ನು ಸಲ್ಲಿಸಲಾಯಿತು. ಈ ದಿನ ನಾನು 14 ಪುಟಗಳ ಕೇಸ್ ಡೈರಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.-32 ಎಂದು ಗುರುತಿಸಲಾಯಿತು. ಕೇಸ್ ಡೈರಿಯಲ್ಲಿ ಪ್ರತಿ ಪುಟದಲ್ಲಿ ನಾನು ಸಹಿ ಮಾಡಿದ್ದು ಅದನ್ನು ನಿ.ಪಿ.- 32(ಎ) ಎಂದು ಗುರುತಿಸಲಾಯಿತು. ಆರೋಪಿಪರ ವಕೀಲರು ಸಿ ಡಿ ಕಾಪಿ ಈಗಾಗಕಲೇ ಅವರಿಗೆ ಸಲ್ಲಿಸಿದ ದೋಷಾರೋಪಣ ಪತ್ರದೊಂದಿಗೆ ಬಂದಿದೆ ಅಂತ ನುಡಿದಿರುತ್ತಾರೆ.

**ಪಾಟೀ ಸವಾಲುಃ ಶ್ರೀ .KK ರವರು LADC ಪರ ವಕೀಲರಿಂದ 3 ನೇ ಆರೋಪಿತರ ಪರವಾಗಿ**:

6. ಈ ಪ್ರಕರಣದ ತನಿಖೆಯನ್ನು ನಡೆಸುವಾಗ ಹಿಂದೆ ನಡೆದ ತನಿಖೆಯನ್ನು ನಾನು ಪರೀಶೀಲೀಸಿದ್ದೇನೆ. ನಿ.ಪಿ.- 19 ನ್ನು ನಾನು ಈ ಪ್ರಕರಣದ ಚಾರ್ಜ್ ಶೀಟ್ ಸಲ್ಲಿವಾಗ ಅಳವಡಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಯಾವ ಕಾರಣಕ್ಕಾಗಿ ಅವರಿಗೆ ದಸ್ತಗಿರಿ ಮಾಡಲಾಗಿದೆ ಅಂತ ಬರವಣಿಗೆಯಲ್ಲಿ ತಿಳಿಸಿರುವುದಿಲ್ಲ ಅಂದರೆ ದೂರವಾಣಿ ಮೂಲಕ ತಿಳಿಸಿದ್ದೇನೆ. ಸಾಕ್ಷಿದಾರರು ಹೇಳುತ್ತಾರೆ ಆ ಸಮಯದಲ್ಲಿ ಕರೋನ ಇರುವುದರಿಂದ ದೂರವಾಣಿ ಮೂಲಕ ತಿಳಿಸಿದ್ದೇನೆ. ಆ ರೀತಿ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಭರಣಿ ಹೋಟೆಲ್ ಇತ್ತು ಅಂತ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಭರಣಿ ಹೋಟೆಲ್ ಮಾಲೀಕರನ್ನು ಸಾಕ್ಷಿಯಾಗಿ

ಮಾಡಿಸಿಲ್ಲ ಎಂದರೆ ನಿಜ. ಸ್ಥಳದ ಬಗ್ಗೆ ಸಂಬಂದಪಟ್ಟ ಅಭಿಯಂತರರಿಂದ ಸ್ಕೆಚ್ ತಯಾರಿಸಿರುವುದಿಲ್ಲ. FSL, ಬೆಂಗಳೂರು ಇಲಾಖೆಯಿಂದ ವಸ್ತುಗಳು ನಿ.ಪಿ.- 30 ರಲ್ಲಿ ಹೇಳಿದಂತೆ ಗಾಂಜಾ ಹಸಿ ಇತ್ತು ಅಂತ ವಾಪಸ್ಸು ಬಂದಿರುವುದಿಲ್ಲ ಅಂದರೆ ಹೂವು, ಕಾಂಡ ಮತ್ತು ಎಲೆಗಳನ್ನು ಬೇರ್ಪಡಿಸಿ ಸರಿಯಾಗಿ ಒಣಗಿಸಿ ಕಳುಹಿಸಿಕೊಡಿ ಅಂತ ವಾಪಸ್ಸು ಬಂತು ಅಂತ ಸಾಕ್ಷಿದಾರರು ಹೇಳುತ್ತಾರೆ. ಆ ಸೊಪ್ಪನ್ನು ನಾವು ಬೇರ್ಪಡಿಸಿ ಬೆಂಗಳೂರಿಗೆ ಕಳುಹಿಸದೇ ಬಾತಿ ಗ್ರಾಮದ FSL ಗೆ ಕಳುಹಿಸಿಕೊಟ್ಟಿದ್ದೆ ಎಂದರೆ ನಿಜ. ಆದ್ದರಿಂದ ನಿ.ಪಿ.- 20 ರಂತೆ ನಮಗೆ ಅನುಕೂಲವಾಗುವ ರೀತಿಯಲ್ಲಿ ಬರೆಸಿಕೊಂಡಿದ್ದೇವೆ ಅಂದರೆ ಸರಿಯಲ್ಲ.

7. ಕೃತ್ಯ ನಡೆದಿದೆ ಎಂದು ಹೇಳಲಾಗುವ ಸ್ಥಳದ ಸ್ಥಳೀಯ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ನಿಜ. ಬಾತಿ FSL ಗೆ ಕಳುಹಿಸುವ ಕಾಲಕ್ಕೆ Chain of Custody Form ನ್ನು ಪಡೆದಿಲ್ಲ. ವಿಶ್ಲೇಷಣೆ ಮಾಡಿದ ನಂತರ ಮಾದರಿಯನ್ನು ವಾಪಸ್ ಕೊಟ್ಟ ಕಾಲಕ್ಕೆ ಅದರ ತೂಕ 50 ಗ್ರಾಂ ಇರಲಿಲ್ಲ ಎಂದರೆ 50 ಗ್ರಾಂ ನ್ನೇ ವಾಪಸ್ಸು ಕೊಟ್ಟರು ಎನ್ನುತ್ತಾರೆ. 65(ಬಿ) ಪ್ರಮಾಣಪತ್ರವನ್ನು ನಾನು ಪಡೆದುಕೊಂಡಿಲ್ಲ ಎಂದರೆ ಸುಳ್ಳು. ನಾನು ಗಾಂಜಾವನ್ನು disposal committee ಗೆ ಕಳುಹಿಸಿದ ಬಗ್ಗೆ ಮಾಹಿತಿ ಇಲ್ಲ. ನಿ.ಪಿ.- 30 ಮತ್ತು 31 ಗಳ ಮೇಲೆ ನ್ಯಾಯಾಧೀಶರು True copy ಅಂತ ಸಹಿ ಮಾಡಿಲ್ಲ ಎಂದರೆ ನಿಜ.

8. ಮೊದಲನೇ inventory ಏನಾಯಿತು ಎಂದು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂನದ ಯಾವುದೇ ವಸ್ತುಗಳನ್ನು ಅಮಾನತ್ತು ಮಾಡಿಕೊಂಡಿಲ್ಲ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 3 ನೇ ಆರೋಪಿತರ ಪರ ವಕೀಲರ ಪರವಾಗಿಃ 2 ನೇ ಆರೋಪಿತರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.